
ಬಾಲಸುಬ್ರಹ್ಮಣ್ಯ ಕಂಜರ್ಪಣೆ ಹೆಸರಿನ ಮೂಲಕ ಸಹೃದಯರಿಗೆ ಪರಿಚಿತರಾದ ಸುಳ್ಯ ತಾಲ್ಲೂಕಿನ ಕೆ.ಪಿ. ಬಾಲಸುಬ್ರಮಣ್ಯ ವೃತ್ತಿಯಿಂದ ವಕೀಲರು. ಕಾವ್ಯ, ಕಥನ, ಅಂಕಣ, ವಿಮರ್ಶೆ ಅವರ ಆಸಕ್ತಿಯ ಕ್ಷೇತ್ರಗಳು. 'ಸ್ವಯಂಪ್ರಭೆ', 'ಒಡೆದ ಪ್ರತಿಮೆಗಳು' (ಕವನ ಸಂಕಲನಗಳು), 'ಅದೃಷ್ಟದ ಹುಡುಗಿ' (ಕಥಾ ಸಂಕಲನ), 'ಬಿಸಿಲ ಹಂದರ' (ವೈಚಾರಿಕ ಲೇಖನಗಳು) ಪ್ರಸಿದ್ಧ ಕೃತಿಗಳು.

ನಕ್ಕೂ ಸುಸ್ತಾಗಿದ್ದೆ. ಜೊತೆಗೇ ಅವರ ಅನುಭವದ ಮಾತುಗಳೂ ಸತ್ಕಾರವೂ ಆಗುತ್ತಿತ್ತು. ಅವರ ಮನೆಯಲ್ಲೇ ನಾನು ನ್ಯಾಯಮೂರ್ತಿ ಶತಾಯುಷಿ ನಿಟ್ಟೂರರನ್ನು ಭೇಟಿಯಾದದ್ದು. ಅವರು ಮಡಿಕೇರಿಗೆ ಬರುವ ಯೋಜನೆಯನ್ನು ಹಾಕಿದರೂ ಅದು ಗಣೇಶನ ಮದುವೆಗೆ ನೂರೆಂಟು ವಿಘ್ನವೆಂಬಂತೆ ಮುಂದೂಡಲ್ಪಟ್ಟಿತು; ಕೊನೆಗೂ ಪೂರ್ಣವಾಗದೇ ಹೋಯಿತು ಎಂಬ ವ್ಯಥೆ ನನಗಿದೆ; ಅವರಿಗೂ ಇತ್ತೆಂದು ಅವರ ಪತ್ರಗಳಿಂದ ಗೊತ್ತಾಗುತ್ತದೆ.

ಅವರ ಬರಹಗಳು ಮೇಲ್ನೋಟಕ್ಕೆ ಹಾಸ್ಯ ಪ್ರಬಂಧಗಳಂತಿದ್ದರೂ ಆಳದಲ್ಲಿ ಗಾಢ ವಿಷಾದವನ್ನು ಸ್ಫುರಿಸುತ್ತಿದ್ದವು. 'ಶ್ರಾದ್ಧ'ವೆಂಬ ಲೇಖನ ಹಾಸ್ಯದ



ಪರವಾಗಿ ನೀವೆಷ್ಟೇ ಪಣತೊಟ್ಟರೂ ಶ್ರೇಷ್ಠ ಕಥೆಯಾಗಿದೆಯೆಂದು ತಿಳಿಸಿದೆ. 'ಗಂಡಭೇರುಂಡ'ವೆಂಬ ಪ್ರಬಂಧ ಪ್ರಬಂಧವೇ ಅಲ್ಲ, ಮಾಸ್ತಿ ಸಂಪ್ರದಾಯದ ಅದ್ಭುತ ಕಥೆಯಾಗಿದೆಯೆಂದು ತಿಳಿಸಿದೆ. ಈ ಬಗ್ಗೆ ನನಗೂ ಅವರಿಗೂ ಫೋನಿನಲ್ಲಿ ಮತ್ತು ಭೇಟಿಯಾದಾಗ ಗಂಟೆಗಟ್ಟಲೆ ಚರ್ಚೆಯಾಗುತ್ತಿತ್ತು.

ವೈದ್ಯರು ಅವರ ಯಾವುದೇ ಕೃತಿ ಪ್ರಕಟವಾದಾಕ್ಷಣ ನನಗೊಂದು ಪ್ರತಿಯನ್ನು ಕಳಿಸುತ್ತಿದ್ದರು. ಅವರ 'ರುಚಿಗೆ ಹುಳಿಯೊಗರು' ಕೃತಿ ಪ್ರಕಟವಾದಾಗ 'ಮೂರೇ ಪುಸ್ತಕ ಬರೆದು ನೂರರ ಖ್ಯಾತಿ ಗಳಿಸಿದ ಶ್ರೀನಿವಾಸ ವೈದ್ಯರು' ಎಂದು ಅವರನ್ನು ಪ್ರಶಂಸಿಸಲಾಯಿತು. ಅವರು ನನಗೆ ಬರೆದ ಪತ್ರದಲ್ಲಿ, 'ಇಂತಹ ಮಾತುಗಳನ್ನು ಕೇಳಿ ಹಿಗ್ಗಬೇಕೋ ಅಥವಾ ಸಾಲುಗಳ ಮಧ್ಯೆ ಅಡಗಿರಬಹುದಾದ ಕೊಕ್ಕೆ, ಕೊಂಕು, ವ್ಯಂಗ್ಯಗಳನ್ನು ನೆನೆದು ಕುಗ್ಗಬೇಕೋ ತಿಳಿಯದು' ಎಂದಿದ್ದರು. ಜೊತೆಗೆ ಅವರದೇ ಹಾಸ್ಯ ಧಾಟಿಯಲ್ಲಿ, 'ಈಗ ಈ ಮೂರೂ ಪುಸ್ತಕಗಳು ನಿಮ್ಮ ಬಳಿ ಇವೆ. ನನಗೆ ಬಂದ ಈ ಖ್ಯಾತಿ ಕುಖ್ಯಾತಿಗಳ ಬಗ್ಗೆ ನೀವು ತಲೆಕೆಡಿಸಿಕೊಳ್ಳಿ' ಎಂದು ಬರೆದಿದ್ದರು.

ಆ ಹೊತ್ತಿಗೆ ವೈದ್ಯರಿಗೆ 65 ದಾಟಿತ್ತು.

ವೈದ್ಯರೊಮ್ಮೆ ತಮ್ಮ ಒಳತೋಟಿಯನ್ನು ಹೀಗೆ ತೋಡಿಕೊಂಡಿದ್ದರು: 'ಯಾಕೋ ನನಗೆ ಇತ್ತೀಚೆಗೆ 'ಹಾಸ್ಯಗಾರ' ಎಂಬ ಈ ಬಿರುದು ಬೇಸರ ತರಿಸುತ್ತಿದೆ. ಯಾಕೋ ಗೊತ್ತಿಲ್ಲ... ಯಾವುದಾದರೊಂದು ವಿಷಯದ ಮೇಲೆ ಮಾತಾಡುತ್ತ ಅದರಲ್ಲಿ ಹಾಸ್ಯ ಬೆರೆಸುವುದು ಬೇರೆ. ಆದರೆ, ಸುಸಂಬದ್ಧವಾಗಿಯೇ ಬರಿಯೇ ಜೋಕ್ಸ್ ಹೇಳುತ್ತ ಹಾಸ್ಯ ಹುಟ್ಟಿಸುವುದೇ ಬೇರೆ.'

ವೈದ್ಯರ ನೆನಪಾದಾಗ ಚಾಪ್ಲಿನ್ ಮತ್ತೆ ಮತ್ತೆ ನೆನಪಾಗುತ್ತಾನೆ. 'ಮಳೆಯಲ್ಲಿ ಅಳುವುದು ಒಳ್ಳೆಯದು;